# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ - 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ

**ವಿಷಯ:** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ(ಮಿಮ್ಸ್) ಸ್ನಾತಕ ಪದವಿಗೆ 100 ವಿದ್ಯಾರ್ಥಿಗಳಿಂದ 150 ವಿದ್ಯಾರ್ಥಿಗಳಿಗೆ ಎಂ.ಸಿ.ಐ ಈಗಾಗಲೇ ಅನುಮತಿ ನೀಡಲಾಗಿದೆ. ಸ್ನಾತಕೋತ್ತರ ಪದವಿಯ ಈಗಾಗಲೇ ವಿವಿಧ ಕೋರ್ಸುಗಳಿಗೆ 73 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ಆದರೆ ಎಂ.ಸಿ.ಐ ನಿಯಮಾವಳಿ ಪ್ರಕಾರ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಬೋಧನಾ ಸಿಬ್ಬಂದಿಗಳ ಕೊರತೆ ಇದ್ದು, ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಮಹಿಳಾ ವೈದ್ಯಾಧಿಕಾರಿ ಒಟ್ಟು 14 ಹುದ್ದೆಗಳನ್ನು ಸೃಜಿಸುವಂತೆ ಸರ್ಕಾರವನ್ನು ಕೋರಲಾಗಿತ್ತು. ಆದರೆ ಸರ್ಕಾರ ಆರ್ಥಿಕ ನಿರ್ಬಂಧಗಳ ದೃಷ್ಟಿಯಿಂದ ಸ್ನಾತಕೋತ್ತರ ಬೋಧಕ ಹುದ್ದೆಗಳನ್ನು ಸೃಜಿಸಲು ಸಾಧ್ಯವಿಲ್ಲವೆಂದು ತಿಳಿಸಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವುದನ್ನು ಕೈ ಬಿಡುವಂತೆ ತಿಳಿಸಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

*******

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ೧೦೦ ಎಂಬಿಬಿಎಸ್ ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ 2005-06ನೇ ಸಾಲಿನಿಂದ ಪ್ರಾರಂಭಗೊಳಿಸಲಾಗಿರುತ್ತದೆ ತದನಂತರ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ೨೦೧೬-೧೭ನೇ ಸಾಲಿನಿಂದ ಎಂಬಿಬಿಎಸ್ ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯನ್ನು ೧೦೦ ರಿಂದ ೧೫೦ಕ್ಕೆ ಹೆಚ್ಚಿಸಲಾಗಿದೆ. ಅದರಂತೆ ಎಂಬಿಬಿಎಸ್ ವ್ಯಾಸಂಗಕ್ಕಾಗಿ ಪ್ರತಿ ವರ್ಷ ೧೫೦ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುತ್ತಿರುತ್ತಾರೆ.

ಮುಂದುವರೆದು, ಎಂಬಿಬಿಎಸ್ ಪದವಿ ಪೂರೈಸಿದ ವಿದ್ಯಾರ್ಥಿಗಳ ಹೆಚ್ಚಿನ ವ್ಯಾಸಂಗಕ್ಕಾಗಿ ಭಾರತೀಯ ವೈದ್ಯಕೀಯ ಮಂಡಳಿ ಹಾಗೂ ರಾಜ್ಯ ಸರ್ಕಾರದ ಅನುಮತಿ ಮೇರೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಈ ಕೆಳಕಂಡ ಒಟ್ಟು ೧೭ ವಿಭಾಗಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿರುತ್ತದೆ.

| ಕ್ರ.ಸಂ | ವಿಭಾಗ |
|---|---|
| 1. | ಅಂಗರಚನಾಶಾಸ್ತ್ರ ವಿಭಾಗ |
| 2. | ಶರೀರ ಕ್ರಿಯಾಶಾಸ್ತ್ರ ವಿಭಾಗ |
| 3. | ಜೀವರಸಾಯನಶಾಸ್ತ್ರ ವಿಭಾಗ |
| 4. | ಸೂಕ್ಷ್ಮ ಜೀವಿಶಾಸ್ತ್ರ ವಿಭಾಗ |
| 5. | ರೋಗ ಲಕ್ಷಣಶಾಸ್ತ್ರ ವಿಭಾಗ |
| 6. | ಔಷಧಶಾಸ್ತ್ರ ವಿಭಾಗ |
| 7. | ಸಮುದಾಯ ವೈದ್ಯಶಾಸ್ತ್ರ ವಿಭಾಗ |
| 8. | ವಿಧಿ ವೈದ್ಯಶಾಸ್ತ್ರ ವಿಭಾಗ |
| 9. | ವೈದ್ಯಶಾಸ್ತ್ರ ವಿಭಾಗ |
| 10. | ಚರ್ಮರೋಗ ವಿಭಾಗ |
| 11. | ನೇತ್ರಾ ಚಿಕಿತ್ಸಾ ವಿಭಾಗ |
| 12. | ಅರವಳಿಕೆ ವಿಭಾಗ |

| | |
|---|---|
| 13. | ಮಕ್ಕಳ ವಿಭಾಗ |
| 14. | ಶಸ್ತ್ರ ಚಿಕಿತ್ಸಾ ವಿಭಾಗ |
| 15. | ಪ್ರಸೂತಿ ಮತ್ತು ಸ್ತ್ರೀ ರೋಗ ಶಾಸ್ತ್ರ ವಿಭಾಗ |
| 16. | ಕೀಲು ಮತ್ತು ಮೂಳೆ ವಿಭಾಗ |
| 17. | ಇ.ಎನ್.ಟಿ. ವಿಭಾಗ |

ಮೇಲ್ಕಂಡ ವಿಭಾಗಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಎಂಸಿಐ ಮಾರ್ಗಸೂಚಿಗಳನ್ವಯ ಅವಶ್ಯವಿರುವ ಬೋಧಕ ಹುದ್ದೆಗಳನ್ನು ಕಾಲಕಾಲಕ್ಕೆ ಸೃಜಿಸಲಾಗಿರುತ್ತದೆ. ಈ ರೀತಿ ಈಗಾಗಲೇ ಸರ್ಕಾರದಿಂದ ಸೃಜನೆಯಾಗಿರುವ ಬೋಧಕ ಹುದ್ದೆಗಳನ್ನು ಹೊರತುಪಡಿಸಿ ಎಂಸಿಐ ಮಾರ್ಗಸೂಚಿಗಳನುಸಾರ ಯೂನಿಟ್ ಪದ್ಧತಿಯನ್ನು ಅಳವಡಿಸಲು ಹೆಚ್ಚುವರಿಯಾಗಿ ಅಗತ್ಯವಿರುವ ಬೋಧಕ ಹುದ್ದೆಗಳ ವಿವರ ಹಾಗೂ ವಿಭಾಗಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ | ವಿಭಾಗ | ಪಿಜಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಸೃಜಿಸಬೇಕಾದ ಹುದ್ದೆ | ಸಂಖ್ಯೆ |
|---|---|---|---|---|
| 1 | ವೈದ್ಯಶಾಸ್ತ್ರ ವಿಭಾಗ | 33 | ಸಹಾಯಕ ಪ್ರಾಧ್ಯಾಪಕ | 02 |
| 2 | ಶಸ್ತ್ರ ಚಿಕಿತ್ಸಾ ವಿಭಾಗ | 04 | ಸಹ ಪ್ರಾಧ್ಯಾಪಕ | 01 |
| | | | ಸಹಾಯಕ ಪ್ರಾಧ್ಯಾಪಕ | 03 |
| 3 | ಅರವಳಿಕಾಶಾಸ್ತ್ರ ವಿಭಾಗ | 24 | ಸಹ ಪ್ರಾಧ್ಯಾಪಕ | 01 |
| | | | ಸಹಾಯಕ ಪ್ರಾಧ್ಯಾಪಕ | 01 |
| 4 | ಕೀಲು ಮತ್ತು ಮೂಳೆ ವಿಭಾಗ | 09 | ಸಹ ಪ್ರಾಧ್ಯಾಪಕ | 01 |
| | | | ಸಹಾಯಕ ಪ್ರಾಧ್ಯಾಪಕ | 02 |
| 5 | ರಕ್ತನಿಧಿ ವಿಭಾಗ/ರೋಗ ಲಕ್ಷಣ ಶಾಸ್ತ್ರ ವಿಭಾಗ | 11 | ಸಹ ಪ್ರಾಧ್ಯಾಪಕ | 01 |
| 6 | ಪ್ರಸೂತಿ ಮತ್ತು ಸ್ತ್ರೀ ರೋಗ ಶಾಸ್ತ್ರ ವಿಭಾಗ | 03 | ಮಹಿಳಾ ವೈದ್ಯಾಧಿಕಾರಿ | 01 |
| 7 | ಕ್ಷಯ ಮತ್ತು ಎದೆರೋಗಗಳ ವಿಭಾಗ | 00 | ಸಹ ಪ್ರಾಧ್ಯಾಪಕ | 01 |
| ಒಟ್ಟು | | 84 | | 14 |

ಪ್ರಸ್ತುತ ಇರುವ ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹೊಸದಾಗಿ ಹುದ್ದೆಗಳನ್ನು ಸೃಜಿಸದೇ ಇರಲು ಹಾಗೂ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸದೇ ಇರಲು ತೀರ್ಮಾನಿಸಲಾಗಿತ್ತು. ಪ್ರಸ್ತುತ ಕ್ಷಯ ಮತ್ತು ಎದೆರೋಗಗಳ ವಿಭಾಗ ಹೊರತುಪಡಿಸಿ ಇನ್ನುಳಿದ ಎಲ್ಲಾ ವಿಭಾಗಗಳಲ್ಲೂ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಈಗಾಗಲೇ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿರುವ ವಿಭಾಗಗಳಿಗೆ ಎಂಸಿಐ ಮಾರ್ಗಸೂಚಿಯನುಸಾರ ಹೆಚ್ಚುವರಿಯಾಗಿ ಅವಶ್ಯವಿರುವ ಬೋಧಕ ಹುದ್ದೆಗಳನ್ನು ಸೃಜಿಸದೇ ಇದ್ದಲ್ಲಿ ಎಂಸಿಐ ನಿಂದ ಸದರಿ ವಿಭಾಗಗಳ ಮಾನ್ಯತೆ ರದ್ದುಗುವುದನ್ನು ಹಾಗೂ ವಿದ್ಯಾರ್ಥಿಗಳ ಮುಂದಿನ

ಭವಿಷ್ಯಕ್ಕೆ ಅನಾನುಕೂಲತೆ ಉಂಟಾಗುವುದನ್ನು ಮನಗಂಡು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಶಾಸ್ತ್ರ ವಿಭಾಗ, ಶಸ್ತ್ರಚಿಕಿತ್ಸಾ ವಿಭಾಗ, ಅರಿವಳಿಕಾಶಾಸ್ತ್ರ ವಿಭಾಗ, ಕೀಲು ಮತ್ತು ಮೂಳೆ ವಿಭಾಗ, ರಕ್ತನಿಧಿ ವಿಭಾಗ/ ರೋಗಲಕ್ಷಣ ವಿಭಾಗ, ಪ್ರಸೂತಿ ಮತ್ತು ಸ್ತ್ರೀರೋಗಶಾಸ್ತ್ರ ವಿಭಾಗ ಹಾಗೂ ಕ್ಷಯ ಮತ್ತು ಎದೆರೋಗಗಳ ವಿಭಾಗಗಳಿಗೆ ಎಂಸಿಐ ಮಾರ್ಗಸೂಚಿಯಾನುಸಾರ ಅವಶ್ಯವಿರುವ ಬೋಧಕ ಹುದ್ದೆಗಳನ್ನು ಸೃಜಿಸುವ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

**ಸಂಖ್ಯೆ: ಎಂಇಡಿ/340/ಎಂಪಿಎಸ್/2020**

**(ಡಾ|| ಕೆ. ಸುಧಾಕರ್)**
ವೈದ್ಯಕೀಯ ಶಿಕ್ಷಣ ಸಚಿವರು